ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)
ಜಿ.ಕೆ.ವಿ.ಕೆ., ಬೆಂಗಳೂರು–560065

# * ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

**ದಿನಾಂಕ:** 04.07.2023

## ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೀಮಿತವಾಗಿದೆ

### ಈ ವಾರದ ಹವಾಮಾನ ಮುನ್ಸೂಚನೆ(ಭಾರತೀಯ ಹವಾಮಾನ ಇಲಾಖೆ)

### (ದಿನಾಂಕ 05-07-2023 ರಿಂದ 09-07-2023 ವರೆಗೆ)

| ನಿಯತಾಂಕಗಳು | 05.07.2023 | 06.07.2023 | 07.07.2023 | 08.07.2023 | 09.07.2023 |
|---|---|---|---|---|---|
| ಮಳೆ (ಮಿ ಮಿ) | 15 | 13 | 10 | 5 | 4 |
| ಗರಿಷ್ಠ ಉಷ್ಣಾಂಶ °(ಡಿ.ಸೆ. ) | 30 | 29 | 28 | 28 | 28 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 21 | 20 | 20 | 20 | 20 |
| ಮೋಡ (ಪ್ರಮಾಣ) | 6 | 6 | 6 | 6 | 4 |
| ಆರ್ದ್ರತೆ 7.20 ಬೆ (ಶೇ) | 89 | 89 | 87 | 87 | 87 |
| ಆರ್ದ್ರತೆ 2.20 ಮ (ಶೇ) | 85 | 85 | 84 | 84 | 84 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 10 | 9 | 11 | 12 | 10 |
| ಗಾಳಿಯ ದಿಕ್ಕು ( ಡಿಗ್ರಿ) | 249 | 248 | 248 | 248 | 248 |

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ಹಗುರದಿಂದ ಸಾದಾರಣ ಮಳೆಯಾಗುವ ಸಾದ್ಯತೆ ಇದೆ. ದಿನದ ಗರಿಷ್ಠ ಉಷ್ಣಾಂಶ **28.0-30.0°C** ಮತ್ತು ಕನಿಷ್ಠ **20.0-21.0°C** ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **87-89 %** ಇದ್ದು ಮಧ್ಯಾಹ್ನ **84-85 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **9-12** ಕಿ.ಮೀ. ವೇಗದಲ್ಲಿ ಬೀಸುವ ಸ0ಭವವಿದೆ.

- ಪುನರ್ವಸು ನಕ್ಷತ್ರದ ಮಳೆಯ ಕಾಲವು ಜುಲೈ ತಿಂಗಳ 06 ರಿಂದ ಜುಲೈ 19 ರ ವರೆಗೆ ಇರುತ್ತದೆ. ಈ ನಕ್ಷತ್ರದ ಪೂರ್ವ ಒಣ ವಲಯದ ಸರಾಸರಿ ಮಳೆಯು 48.3 ಮಿ.ಮೀ. ವರೆಗೆ ಮಳೆಯಾಗುತ್ತದೆ.

**ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ**

| ಬೆಳೆಗಳು | ಬೆಳೆಯ ಹಂತ | ಕೃಷಿ ಸಲಹೆಗಳು |
|---|---|---|
| ಸಾಮಾನ್ಯ | | • ಹಗುರದಿಂದ ಸಾದಾರಣ ಮಳೆಯ ಮುನ್ಸೂಚನೆ ಇರುವುದರಿಂದ ಖುಷ್ಕಿ ಜಮೀನಿನಲ್ಲಿ ಬದು ಮತ್ತು ಬಸಿಗಾಲುವೆಗಳನ್ನು ಸ್ವಚ್ಛ ಮಾಡುವುದು ಹಾಗು ಕೃಷಿ ಹೊಂಡಗಳನ್ನು ದುರಸ್ತಿಗೊಳಿಸಿ ನೀರು ನಿಧಾನವಾಗಿ ಹರಿಯುವಂತೆ ಮಾಡುವುದು ಮಣ್ಣಿನ ಸವಕಳಿ ತಪ್ಪಿಸಿ ಹಾಗು ಮಣ್ಣಿನ ಸಂರಕ್ಷಣೆ ಮಾಡುವುದು.<br>• ಮುಂಗಾರು ಬಿತ್ತನೆಯನ್ನು ತೇವಾಂಶದ ಆಧಾರದ ಮೇಲೆ ಬಿತ್ತನೆ ಮುಂದುವರಿಸಿ. ಆಯಾ ವಲಯ ಪ್ರದೇಶಕ್ಕೆ ಶಿಫಾರಸ್ಸು ಮಾಡಿದ ತಳಿಗಳನ್ನೇ ಬಿತ್ತನೆಗೆ ಬಳಸುವುದು ಸೂಕ್ತ.<br>• ಮಳೆಯ ಏರುಪೇರಿಗೆ ಸುಸ್ಥಿರ ಆದಾಯಕೋಸ್ಕರ ಜಮೀನಿನ ಬದುಗಳ ಮೇಲೆ ಹೆಬ್ಬೇವು, ಸಿಲ್ವರ್ ಓಕ್ ಮತ್ತು ಸರ್ವೆ ಮರಗಳನ್ನು ನೆಡುವುದು ಸೂಕ್ತ.<br>• ಮಳೆಯ ಏರುಪೇರಿಗೆ ಸುಸ್ಥಿರ ಆದಾಯಕೋಸ್ಕರ ಜಮೀನಿನ ಬದುಗಳ ಮೇಲೆ/ಸುತ್ತಲು ಮಾವು(ಮಲ್ಲಿಕ ಮತ್ತು ಬಾದಾಮಿ ಕಸಿ ಗಿಡ) ಬೆಳೆಯುವುದು ಸೂಕ್ತ. |

| | | |
|---|---|---|
| **ಮುಂಗಾರು ಬೆಳೆಗಳು** | ಬಿತ್ತನೆ ಮತ್ತು ಮೊಳಕೆ, ಬೆಳವಣಿಗೆ ಹಂತ | **ಏಕಬೆಳೆ ಪದ್ಧತಿಯಲ್ಲಿ ಈ ಕೆಳಗಿನ ದೀರ್ಘಾವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ**<br>ತೊಗರಿ : ಟಿ.ಟಿ.ಬಿ–7, ಬಿ.ಆರ್.ಜಿ–1,2,4ಮತ್ತು 5<br>ಮುಸುಕಿನ ಜೋಳ: ಗಂಗಾ–11, ಡೆಕ್ಕನ್–103, ವಿಜಯ ಕಾಂಪೋಸಿಟ್, ಕಾಂಪೋಸಿಟ್ ಎನ್.ಪಿ.ಸಿ–6004,6002, ನಿತ್ಯಶ್ರೀ–ಸಂಕರಣ ತಳಿ.<br>**ಎರಡುಬೆಳೆ ಪದ್ಧತಿಯಲ್ಲಿ ಈ ಕೆಳಗಿನ ಮಧ್ಯಮಾವಧಿ ಮತ್ತು ಕಡಿಮೆ ಅವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ**<br>ನೆಲಗಡಲೆ: ಟಿ.ಎಂ.ವಿ–2, ಜೆ.ಎಲ್–24 ಮತ್ತು ಕೆ.ಸಿ.ಜಿ–6<br>ಅಲಸಂದೆ : ಟಿ.ವಿ.ಎಕ್ಸ್–944, ಕೆ.ಬಿ.ಸಿ–1<br>ಹೆಸರು :ಪಿ.ಎಸ್–16, ಪಿ.ಡಿ.ಎಮ್–84, 178 , ಉದ್ದು: ಕರಗಾವ್–3, ಟಿ–9, ರಶ್ಮಿ<br>ತೊಗರಿ ಬಿತ್ತನೆಗೆ ಮುಂಚೆ ಬೀಜೋಪಚಾರ ಮಾಡುವುದು ಉತ್ತಮ, ಕಾರ್ಬೆನ್‌ಡೈಜಿಮ್ @ 2 ಗ್ರಾಂ/ ಪ್ರತಿ ಕೆ.ಜಿ ಬೀಜಕ್ಕೆ ಉಪಚರಿಸಿ, ಮತ್ತು ಜೈವಿಕ ಕೀಟನಾಶಕಗಳಾದ ಟ್ರೈಕೋಡರ್ಮ ಪಿರಿಡೆ @ 4 ಗ್ರಾಂ/ ಪ್ರತಿ ಕೆ.ಜಿ ಬೀಜಕ್ಕೆ ಅಥವಾ ಸುಡೋಮೋನಾಸ್ ಫ್ಲುರೆಸೆನ್ಸ್ @ 10 ಗ್ರಾಂ/ ಪ್ರತಿ ಕೆ.ಜಿ ಬೀಜಕ್ಕೆ ಮತ್ತು ರೈಜೋಬಿಯಂ @ 10 ಗ್ರಾಂ/ ಪ್ರತಿ ಕೆ.ಜಿ ಬೀಜಕ್ಕೆ ಬೆರೆಸಿ ಉಪಚರಿಸಿ.<br>➢ ಈಗಾಗಲೇ ಮೇ ಮತ್ತು ಜೂನ್ ತಿಂಗಳಲ್ಲಿ ಬಿತ್ತನೆ ಮಾಡಿರುವಂತಹ ದೀರ್ಘಾವಧಿ ಬೆಳೆಗಳಾದ ತೊಗರಿ, ಹರಳು ಬಿತ್ತನೆಯಾಗಿದ್ದಲ್ಲಿ ಮೇಲೆ ತಿಳಿಸಿರುವ ಬೇಸಾಯ ಕ್ರಮಗಳ ಜೊತೆಗೆ, ಸಾಲುಗಳ ಮಧ್ಯದಲ್ಲಿರುವ ಮಣ್ಣನ್ನು ಗಿಡದ ಬುಡಕ್ಕೆ ಹಾಕುವುದರಿಂದ ಭೂಮಿಯು ದಿಂಡು ಸಾಲಾಗಿ ಪರಿವರ್ತನೆಯಾಗುತ್ತದೆ ಇದರಿಂದ ಗಿಡಗಳಿಗೆ ಹೆಚ್ಚು ಸಿಗುವಂತಾಗಿ ಒಣಹವೆಯ ಅನಾನುಕೂಲತೆಯನ್ನು ಮುಂದೂಡಬಹುದು.<br>➢ ಆರ್ದ್ರತೆ ಹೆಚ್ಚಿರುವುದರಿಂದ ಬಿತ್ತನೆ ಮಾಡಿರುವ ಬೆಳೆಗಳಲ್ಲಿ ಕೀಟ ಹಾಗೂ ರೋಗಗಳು ಹೆಚ್ಚಬಹುದು. ಆದುದರಿಂದ ಬೆಳೆಗಳನ್ನಾಧರಿಸಿ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಬೇಕು. |
| **ಮಾವು** | | ➢ ಗಿಡಗಳ ಸುತ್ತಲು ಪಾತಿ ಮಾಡಿ, ಶಿಫಾರಸ್ಸು ಮಾಡಿದ ಗೊಬ್ಬರಗಳನ್ನು ಮಳೆಗಾಲ(ಜೂನ್–ಜುಲೈ) ದಲ್ಲಿ ಒದಗಿಸಬೇಕು.<br>➢ ಕಳೆ ನಿರ್ವಹಣೆಗೆ ಮತ್ತು ಭೂಮಿಯಲ್ಲಿನ ತೇವಾಂಶವನ್ನು ಸಂರಕ್ಷಿಸಲು ಅಂತರ ಬೇಸಾಯ ಮಾಡಬೇಕು.<br>➢ ಮಾವಿನಲ್ಲಿ ಒತ್ತಾಗಿ ಬೆಳೆದಿರುವ ರೆಂಬೆಗಳನ್ನು ಕತ್ತರಿಸಬೇಕು ಇದರಿಂದ ಸೂರ್ಯನ ಬೆಳಕು ಒಳಬಾಗಕ್ಕೆ ಬೀಳುತ್ತದೆ ಇದರಿಂದ ಒಳಭಾಗದಲ್ಲೂ ಮುಂದಿನ ಬಾರಿ ಹೂ ಮತ್ತು ಕಾಯಿ ಕಚ್ಚುತ್ತವೆ. |
| **ಪಶುಸಂಗೋಪನೆ** | | 1. **ಚಪ್ಪೆ ರೋಗ :** ಈ ರೋಗವು ಬ್ಯಾಕ್ಟೀರಿಯಾದಿಂದ ಹರಡುತ್ತದೆ.<br>2. ಈ ರೋಗವು ದನ, ಎಮ್ಮೆ, ಕುರಿಗಳಲ್ಲಿ ಹರಡುತ್ತದೆ. ಸಾಮಾನ್ಯವಾಗಿ ಈ ರೊಗವು ಮಳೆಗಾಲದ ಕೊನೆಯಲ್ಲಿ ಕಾಣುತ್ತದೆ. ಚಪ್ಪೆ ರೋಗದ ಲಸಿಕೆಯನ್ನು ಪ್ರತಿ ವರ್ಷವೂ ಜೂನ್/ಜುಲೈ ತಿಂಗಳಲ್ಲಿ ಮಾಡಿಸುವುದು.<br>3. ಹೆಚ್ಚು ಕರಾವು ಕೊಡುವ ರಾಸುಗಳ ಆಹಾರದಲ್ಲಿ ಕನಿಷ್ಠ ಶೇ. 17 ರಷ್ಟು ನಾರಿನ ಅಂಶವಿರಬೇಕು ( ಎನ್.ಡಿ.ಎಫ್. ಶೇ.22 ರಷ್ಟಿರಬೇಕು.)<br>4. ಹೆಚ್ಚು ಪಶು ಆಹಾರ ತಿನ್ನಿಸುವ ಸಮಯದಲ್ಲಿ ಅದನ್ನು 3–4 ಸಮಭಾಗ ಮಾಡಿ ನಿತ್ಯ ನಾಲ್ಕು ಬಾರಿ ತಿನ್ನಿಸುವುದು ಉತ್ತಮ.<br>5. ಬೆಳೆಯಲ್ಲಿ ಶೇ. 65–70 ರಷ್ಟು ತೇವಾಂಶ ಇರಬೇಕು. ತೇವಾಂಶ ಇದಕ್ಕಿಂತಲೂ ಕಡಿಮೆಯಾದರೆ ಹುದುಗುವಿಕೆ ವಿಫಲಗೊಂಡು ಕಳಪೆ ಗುಣಮಟ್ಟದ ಕಂದು ಬಣ್ಣದ ರಸಮೇವು ತಯಾರಾಗುತ್ತದೆ. ಇದೇ ರೀತಿ ಮೇವಿನಲ್ಲಿ ತೇವಾಂಶ ಶೇ.70 ಕ್ಕಿಂತಲೂ ಹೆಚ್ಚಿದ್ದರೆ ರಸಸಾರ ಹೆಚ್ಚಾಗಿ ಮೇವು ಹುಳಿಯಾಗಿ ಕೊಳೆತ ವಾಸನೆಯಿಂದ ಕೂಡಿರುತ್ತದೆ. |


**ನೋಡಲ್ ಅಧಿಕಾರಿ:**

ಕೃಷಿ ಹವಾಮಾನ ವಿಭಾಗ

**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**


**ಮೊಬೈಲ್ ಆಫ್:**

- ➢ ರೈತರು "ದಾಮಿನಿ" ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮುನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ➢ ಹಾಗೆಯೇ "ಮೌಸಮ್" ಮತ್ತು "ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗೆ *mausam.imd.gov.in* ಜಾಲತಾಣದಲ್ಲಿ ಮಾಹಿತಿ ಪಡೆಯಿರಿ.